**D**

**SL. No. : Q**

**CCE PR**
**UN-REVISED**

ಒಟ್ಟು ಪ್ರಶ್ನೆಗಳ ಸಂಖ್ಯೆ : 58 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

Total No. of Questions : 58 ] [ Total No. of Printed Pages : 8

**ಸಂಕೇತ ಸಂಖ್ಯೆ : 62-K** **Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

ದಿನಾಂಕ : 28. 06. 2018 ] [ Date : 28. 06. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ 12-15 ರವರೆಗೆ ] [ Time : 9-30 A.M. to 12-15 P.M.

ಗರಿಷ್ಠ ಅಂಕಗಳು : 100 ] [ Max. Marks : 100

## *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು 58 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

## ವಿಭಾಗ – 'ಎ'

### (ಗದ್ಯ, ಪದ್ಯ, ಪೋಷಕ ಅಧ್ಯಯನ)

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** 16 × 1 = 16

1. ಅಷ್ಟಾದಶಾಕ್ಷರೀ ಮಂತ್ರವು ಯಾವುದು ?
2. ಅನಿಲ್ ಕುಂಬ್ಳೆಯವರು ಕ್ರಿಕೆಟ್ ಕಲಿತ ಸಂಸ್ಥೆ ಯಾವುದು ?
3. ತುಳಜಾಬಾಯಿ ಯಾರು ?
4. ಮೋಹನಪುರದಲ್ಲಿ ಬ್ರಿಟಿಷರ ವಿರುದ್ಧ ನಡೆದ ಚಳವಳಿ ಯಾವುದು ?
5. ಈಶ ಪ್ರಭುವು ಹೆಂಡತಿಯಿಂದ ಏನೆಂದು ಪ್ರಮಾಣ ಮಾಡಿಸಿಕೊಂಡನು ?
6. ನಾ. ಕಸ್ತೂರಿಯವರದು ಯಾವ ಯಾವ ಕ್ಷೇತ್ರಗಳಲ್ಲಿ ಮರೆಯಲಾಗದ ಹೆಸರು ?
7. ನಾ. ಕಸ್ತೂರಿಯವರು ಕನ್ನಡ ಅಣಕವಾಡು ಸಂಪ್ರದಾಯಕ್ಕೆ ನೀಡಿರುವ ದೊಡ್ಡ ಕೊಡುಗೆ ಯಾವುದು ?
8. ಕೋಗಿಲೆಯ ಗಾನವು ಮನುಜ ಲೋಕವನ್ನು ಏನಾಗಿ ಪರಿವರ್ತಿಸಿದೆ ?
9. ದಾಸ್ಯ ಸಂಕೋಲೆ ಕಳಚಿ ಬಿದ್ದರೆ ನಾವು ಏನಾಗುತ್ತೇವೆಂದು ಬಿ.ಆರ್. ಲಕ್ಷ್ಮಣರಾವ್ ಅವರು ಹೇಳಿದ್ದಾರೆ ?
10. ಅಂಬಿಗರ ಚೌಡಯ್ಯನು ಬಡತನಕ್ಕೆ ಯಾವ ಚಿಂತೆ ಎಂದಿದ್ದಾನೆ ?
11. ವಚನ ಪದ್ಯದಲ್ಲಿ ಹೇಳಿರುವಂತೆ ಮಕ್ಕಳಾದ ಮೇಲೆ ಯಾವ ಚಿಂತೆಯು ಮನುಷ್ಯನನ್ನು ಕಾಡುತ್ತದೆ ?
12. ಯಾವ ಮಳೆ ಸುರಿದರೆ ಕೆರೆಗಳು ತುಂಬುತ್ತವೆ ?
13. ಪುಲಿಗೆರೆ ಕವಿಸೋಮನು ಎಂತಹವನು ಮಂತ್ರಿಯಾಗಬೇಕೆಂದಿದ್ದಾನೆ ?
14. ಯುದ್ಧ ಮಾಡಬಲ್ಲವನು ಏನಾಗಬೇಕೆಂದು ಪುಲಿಗೆರೆ ಕವಿಸೋಮನು ಹೇಳಿದ್ದಾನೆ ?
15. ಧರ್ಮಪದನು ಕೊನಾರ್ಕ್ ದೇವಾಲಯಕ್ಕೆ ಏಕೆ ಬಂದನು ?
16. ವಿಶುವನ್ನು ನೋಡಿದೊಡನೆಯೇ ಧರ್ಮಪದನಿಗುಂಟಾದ ಬಯಕೆ ಏನು ?

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** 14 × 2 = 28

17. ಗೊರೂರರು ಒಂದು ರಾತ್ರಿಯನ್ನು ಲಾಕಪ್ಪಿನಲ್ಲಿ ಕಳೆಯಲು ಕಾರಣವೇನು ?
18. ಗೊರೂರರು ಮಿನಿ ಪೊಲೀಸ್ ನಗರದಲ್ಲಿ ದೀಪ ಹೊತ್ತಿದ ಮೇಲೆ ಏನೇನನ್ನು ನೋಡಿದರು ?
19. ಅನಿಲ್ ಕುಂಬ್ಳೆಯವರ ಶಾಲಾ ಶಿಕ್ಷಣವನ್ನು ಕುರಿತು ಬರೆಯಿರಿ.
20. ಐ.ಪಿ.ಎಲ್. ಕ್ರೀಡಾಸ್ಪರ್ಧೆಯಲ್ಲಿ ಕುಂಬ್ಳೆಯವರ ಸಾಧನೆಯೇನು ?
21. ರಾಮಸಿಂಗನಿಗೂ ಸಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ಬರೆಯಿರಿ.

22. ಮೊಘಲರು ಪ್ರಾಣಭೀತಿಯಿಂದ ಪಲಾಯನಗೈಯಲು ಕೆಳದಿ ರಾಣಿ ಚೆನ್ನಮ್ಮ ಕೈಗೊಂಡ ಉಪಾಯಗಳೇನು ?
23. ಕಸ್ತೂರಿಯವರಿಗೆ 'ಸಂಕಟದ ವಿಷಯ'ವಾದುದು ಯಾವುದು ?
24. ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ಹೇಗೆ ವ್ಯಕ್ತವಾಗಿದೆ ?
25. ಎಲ್ಲಾ ಧರ್ಮಗಳ ಉಸಿರು ಒಂದೇ ಎಂದು ಕವಿ ನಿಸಾರ್ ಅಹಮದ್‌ರವರು ಹೇಗೆ ಹೇಳಿದ್ದಾರೆ ?
26. ಭೌಗೋಳಿಕವಾಗಿ ಭಾರತೀಯರೆಲ್ಲ ಒಂದೇ ಎಂದು ಕವಿ ನಿಸಾರ್ ಅಹಮದ್‌ರವರು ಹೇಗೆ ಹೇಳಿದ್ದಾರೆ ?
27. ಅಕ್ಷರವು ನಮಗೆ ಹೊಸ ಜೀವನ ಮತ್ತು ಹೊಸ ರೂಪವನ್ನು ಹೇಗೆ ಕೊಡುತ್ತದೆ ?
28. ಪುರಂದರದಾಸರು ಹೇಳಿರುವಂತೆ ಮನಸ್ಸನ್ನು ಶುದ್ಧವಾಗಿಡಲು ಅನುಸರಿಸಬೇಕಾದ ವಿಧಾನಗಳಾವುವು ?
29. ಒಂದೇ ಗೇಣಿನ ಅಂತರದಲ್ಲಿ ಮುಕ್ತಿಯು ಯಾವಾಗ ದೊರೆಯುವುದೆಂದು ಪುರಂದರದಾಸರು ಹೇಳಿದ್ದಾರೆ ?
30. ಈರಪ್ಪ ಎಂ. ಕಂಬಳಿಯವರು ಮುಂಡರಗಿಗೆ ಹೋಗಲು ಕೊಪ್ಪಳದ ಮೂಲಕ ಹೋಗುವ ಮಾರ್ಗವನ್ನು ಏಕೆ ಆರಿಸಿಕೊಂಡರು ?

**ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿ :** 4 × 3 = 12

31. "ನಾನು ಏನು ಮಾಡಿದರೂ ಕಾನೂನು ಬಿಟ್ಟು ಹೋಗುವುದಿಲ್ಲ."
32. "ಇಕೋ, ಇನ್ನೊಂದು ಧ್ವಜವನ್ನು ತಂದಿರುವೆ"
33. "ಎದೆಯು ಮಿಡಿದು ತಾಳ ಹಿಡಿದು ಕುಣಿಯುತಿಹುದು ಈ ಕ್ಷಣ"
34. "ಹೆಂಡಿರಾದರೆ ಮಕ್ಕಳ ಚಿಂತೆ"
35. **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** 1 × 3 = 3

ಅಕ್ಷರ..............................................................

................................................ ಮಾಯಾದೀಪ

ಅದು ..............................................................

.............................................................. ರೂಪ

***ಅಥವಾ***

ದೀಪ ..............................................................

.............................................................. ದೂತ

ಅವನ ..............................................................

.............................................................. ಸಮಸ್ತ

**ಈ ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** $2 \times 3 = 6$

36. ಜಿ.ಪಿ. ರಾಜರತ್ನಂ

37. ಚೆನ್ನವೀರ ಕಣವಿ

**ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು–ಹತ್ತು* ವಾಕ್ಯಗಳಲ್ಲಿ ಉತ್ತರ ಬರೆಯಿರಿ :** $2 \times 4 = 8$

38. ರಾಣಿ ಅಬ್ಬಕ್ಕದೇವಿ ಪೋರ್ಚುಗೀಸರ ವಿರುದ್ಧ ಹೋರಾಡಿದ್ದಕ್ಕೆ ಕಾರಣ ಹಾಗೂ ಅವರನ್ನು ಸೋಲಿಸಿದ ಪರಿಯನ್ನು ವಿವರಿಸಿ.

***ಅಥವಾ***

ಕಿತ್ತೂರ ರಾಣಿ ಚೆನ್ನಮ್ಮನ ದೇಶಾಭಿಮಾನ ಹಾಗೂ ಅವಳ ವಿರುದ್ಧ ನಡೆಸಿದ ಒಳಸಂಚನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

39. ಮಳೆರಾಯನನ್ನು ರೈತರು ಪ್ರಾರ್ಥಿಸುವ ಪರಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

***ಅಥವಾ***

'ಜಾನಪದ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

## ವಿಭಾಗ – 'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ, ಛಂದಸ್ಸು)

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ :** $12 \times 1 = 12$

40. 'ಧರ್ಮ' ಪದದ ವಿರುದ್ಧಾರ್ಥಕ ರೂಪ

(ಎ) ಅಧರ್ಮ (ಬಿ) ಸುಧರ್ಮ

(ಸಿ) ಪರಧರ್ಮ (ಡಿ) ಸ್ವಧರ್ಮ

41. 'ತಾನು' ಎನ್ನುವುದು ಈ ಸರ್ವನಾಮವಾಗಿದೆ

(ಎ) ಪುರುಷಾರ್ಥಕ (ಬಿ) ಭಾವನಾರ್ಥಕ

(ಸಿ) ಪ್ರಶ್ನಾರ್ಥಕ (ಡಿ) ಆತ್ಮಾರ್ಥಕ

42. ಭೂಮಿ + ಅಲ್ಲಿ ಇದನ್ನು ಕೂಡಿಸಿ ಬರೆದಾಗ

(ಎ) ಭೂಮಿಯಿಂದ (ಬಿ) ಭೂಮಿಯಲ್ಲಿ

(ಸಿ) ಭೂಮಿಯಿಲ್ಲಿ (ಡಿ) ಭೂಮಿವಲ್ಲಿ

43. ಇದು ಷಷ್ಠೀ ವಿಭಕ್ತಿ ಪ್ರತ್ಯಯ

(ಎ) ಅನ್ನು (ಬಿ) ಇಂದ

(ಸಿ) ಅ (ಡಿ) ಅಲ್ಲಿ

44. 'ಪೂರ್ವ' ದಿಕ್ಕಿಗೆ ಇರುವ ಕನ್ನಡ ಪದ

(ಎ) ತೆಂಕಣ (ಬಿ) ಬಡಗಣ

(ಸಿ) ಪಡುವಣ (ಡಿ) ಮೂಡಣ

45. 'ಸೀತೆಯ ಮುಖ ಕಮಲದಂತೆ ಅರಳಿತು' ಇಲ್ಲಿ ಆಗಿರುವ ಅಲಂಕಾರ

(ಎ) ರೂಪಕಾಲಂಕಾರ (ಬಿ) ಉಪಮಾಲಂಕಾರ

(ಸಿ) ದೃಷ್ಟಾಂತಾಲಂಕಾರ (ಡಿ) ಯಮಕಾಲಂಕಾರ

46. ಕ್ರಿಯಾಪದದ ಮೂಲರೂಪ

(ಎ) ಧಾತು (ಬಿ) ಪ್ರಾತಿಪಧಿಕ

(ಸಿ) ಆಖ್ಯಾತ (ಡಿ) ವಿಧ್ಯರ್ಥಕ

47. 'ಹಿಂದೆ ಮುಂದೆ ನೋಡದೆ ಮನೆಮಠ ಬಿಟ್ಟು ಮತ್ತೆ ಮತ್ತೆ ಪಟಪಟನೆ ಮಾತಾಡಬಾರದು' — ಈ ವಾಕ್ಯದಲ್ಲಿರುವ ಅನುಕರಣಾವ್ಯಯ

(ಎ) ಹಿಂದೆ ಮುಂದೆ (ಬಿ) ಮನೆಮಠ

(ಸಿ) ಮತ್ತೆ ಮತ್ತೆ (ಡಿ) ಪಟಪಟನೆ

48. 'ಬೇಗ ಬೇಗ' ಎನ್ನುವುದು

(ಎ) ದ್ವಿರುಕ್ತಿ (ಬಿ) ಜೋಡುನುಡಿ

(ಸಿ) ಪಡೆನುಡಿ (ಡಿ) ನುಡಿಗಟ್ಟು

49. 'ರಾಣಿ' ಪದದ ಬಹುವಚನ ರೂಪ

(ಎ) ರಾಣಿಯರು (ಬಿ) ರಾಣಿಯಂದಿರು

(ಸಿ) ರಾಣಿಗಳು (ಡಿ) ರಾಣಿಯರುಗಳು

50. 'ಪತಾಕೆ' ಪದದ ಅರ್ಥ

(ಎ) ಚಿಟ್ಟೆ (ಬಿ) ಬಾವುಟ

(ಸಿ) ಬಾವುಲಿ (ಡಿ) ತಟ್ಟೆ

51. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳು

(ಎ) 5 (ಬಿ) 13

(ಸಿ) 34 (ಡಿ) 49

## ವಿಭಾಗ – 'ಸಿ'

## (ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)

**ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :** $4 \times 1 = 4$

ಆಧುನಿಕ ಹವ್ಯಾಸಿ ರಂಗಭೂಮಿಗೆ ಭದ್ರ ಬುನಾದಿಯನ್ನು ಹಾಕಿದ ಕಾರಂತರನ್ನು ಹವ್ಯಾಸಿ ರಂಗಭೂಮಿಯ ಹರಿಕಾರರೆಂದು ಕರಿಯುತ್ತಾರೆ. ಇವರು ಬಯಲಿನಲ್ಲಿ ರಂಗಭೂಮಿಯನ್ನು ಕಂಡುಕೊಂಡರು. ಕುವೆಂಪುರವರ 'ಕಿಂದರಜೋಗಿ'ಯ ಪ್ರಯೋಗಕ್ಕಾಗಿ ರಂಗಾಯಣದಲ್ಲಿ ಬೊಮ್ಮನ ಹಳ್ಳಿಯನ್ನೇ ನಿರ್ಮಿಸಿದರು. ಮೈಸೂರಿನ ರಂಗಾಯಣದಲ್ಲಿ 'ಗೋವಿನ ಹಾಡು', 'ಕಿಂದರ ಜೋಗಿ',

'ಚಂದ್ರಹಾಸ', 'ಮೂಕನ ಮಕ್ಕಳು' ಮುಂತಾದ ನಾಟಕಗಳ ಪ್ರಯೋಗವನ್ನು ಮಾಡಿದರು. ಮಕ್ಕಳಿಗೆ ಹೊಸ ರಂಗವನ್ನು ನಿರ್ಮಿಸಿದರು. ಇವರು ನಿರ್ದೇಶಿಸಿದ 'ವಂಶವೃಕ್ಷ', 'ತಬ್ಬಲಿ ನೀನಾದೆ ಮಗನೆ', 'ಚೋಮನ ದುಡಿ' ಚಿತ್ರಗಳಿಗೆ ರಾಷ್ಟ್ರ ಪ್ರಶಸ್ತಿಗಳು ಬಂದಿವೆ.

*ಪ್ರಶ್ನೆಗಳು :*

52. ಕಾರಂತರನ್ನು 'ಹವ್ಯಾಸಿ ರಂಗಭೂಮಿಯ ಹರಿಕಾರ'ರೆಂದು ಏಕೆ ಕರೆಯುತ್ತಾರೆ ?
53. ಕಾರಂತರು ಬೊಮ್ಮನ ಹಳ್ಳಿಯನ್ನು ಏಕೆ ನಿರ್ಮಿಸಿದರು ?
54. ಮಕ್ಕಳಿಗಾಗಿ ಕಾರಂತರು ಹೊಸದಾದ ಲೋಕವನ್ನು ಹೇಗೆ ನಿರ್ಮಿಸಿದರು ?
55. ರಾಷ್ಟ್ರ ಪ್ರಶಸ್ತಿಯನ್ನು ಪಡೆದ ಕಾರಂತರು ನಿರ್ದೇಶಿಸಿದ ಚಿತ್ರಗಳಾವುವು ?

56. **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ :** $1 \times 3 = 3$

- ಶಕ್ತಿಗಿಂತ ಯುಕ್ತಿ ಮೇಲು
- ಬೆಳೆಯುವ ಪೈರು ಮೊಳಕೆಯಲ್ಲಿ
- ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

57. ನಿಮ್ಮನ್ನು ಚನ್ನರಾಯ ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಕಾರ್ತಿಕ್ / ಮಧುಮಿತಾ' ಎಂದು ಭಾವಿಸಿಕೊಂಡು, ಊರಿಗೆ ಹೋಗಬೇಕಾಗಿರುವುದರಿಂದ ಎರಡು ದಿನಗಳ ರಜೆ ನೀಡುವಂತೆ ಕೋರಿ, ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೊಂದು ಪತ್ರವನ್ನು ಬರೆಯಿರಿ. $1 \times 4 = 4$

***ಅಥವಾ***

ನಿಮ್ಮನ್ನು ಶಿಕಾರಿಪುರದ 'ಶ್ರೀಕಾಂತ / ಅಶ್ವಿನಿ' ಎಂದು ಭಾವಿಸಿಕೊಂಡು, ನಿಮ್ಮ ಪರೀಕ್ಷಾ ಸಿದ್ಧತೆಯನ್ನು ತಿಳಿಸುತ್ತಾ ಹರಿಹರದಲ್ಲಿರುವ ನಿಮ್ಮ ತಂದೆಯವರಿಗೆ ಒಂದು ಪತ್ರವನ್ನು ಬರೆಯಿರಿ.

58. **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ :** $1 \times 4 = 4$

- ಮಕ್ಕಳ ದಿನಾಚರಣೆ
- ಪರಿಸರ ಮಾಲಿನ್ಯ
- ನನ್ನ ನೆಚ್ಚಿನ ಕವಿ